ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 596 (732)

ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 05.03.2021

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಂಡ್ಯ ಜಿಲ್ಲೆಯಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಯೋಜನೆಯಡಿ ಮಂಡ್ಯ ಜಿಲ್ಲೆಯ ಒಟ್ಟು 233 ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಈ ಪೈಕಿ 120 ಗ್ರಾಮ ಪಂಚಾಯತ್‌ಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯ ವಿಸ್ತೃತ ಯೋಜನಾ ವರದಿಗಳು ಅನುಮೋದನೆಯಾಗಿದ್ದು, ತಾಲ್ಲೂಕುವಾರು ವಿವರವನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.
<table>
<tr><th>ಕ್ರ.ಸ.</th><th>ತಾಲ್ಲೂಕು</th><th>ಒಟ್ಟು ಗ್ರಾ.ಪಂ</th><th>DPR ಅನುಮೋದನೆಯಾಗಿರುವ ಗ್ರಾ.ಪಂ.ಗಳು</th></tr>
<tr><td>1</td><td>ಕೃಷ್ಣರಾಜಪೇಟೆ</td><td>34</td><td>21</td></tr>
<tr><td>2</td><td>ಮದ್ದೂರು</td><td>42</td><td>38</td></tr>
<tr><td>3</td><td>ಮಳವಳ್ಳಿ</td><td>39</td><td>18</td></tr>
<tr><td>4</td><td>ಮಂಡ್ಯ</td><td>46</td><td>17</td></tr>
<tr><td>5</td><td>ನಾಗಮಂಗಲ</td><td>27</td><td>10</td></tr>
<tr><td>6</td><td>ಪಾಂಡವಪುರ</td><td>24</td><td>06</td></tr>
<tr><td>7</td><td>ಶ್ರೀರಂಗಪಟ್ಟಣ</td><td>21</td><td>10</td></tr>
<tr><td colspan="2">ಒಟ್ಟು</td><td>233</td><td>120</td></tr>
</table>
</td></tr>
<tr><td>(ಆ)</td><td>ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಈಗಾಗಲೇ ಹಸಿಕಸ ಮತ್ತು ಒಣಕಸ ಎಂದು ಪ್ರತ್ಯೇಕಿಸಿ ಸಂಗ್ರಹಿಸಲಾಗುತ್ತಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಘನ ತ್ಯಾಜ್ಯ ನಿರ್ವಹಣಾ ಚಟುವಟಿಕೆಯಡಿ ವಿಸ್ತೃತ ಯೋಜನಾ ವರದಿಗಳಿಗೆ ಅನುಮೋದನೆ ಪಡೆದಿರುವ 120 ಗ್ರಾಮ ಪಂಚಾಯಿತಿಗಳ ಪೈಕಿ 28 ಗ್ರಾಮ ಪಂಚಾಯಿತಿಗಳಲ್ಲಿ ಕಸವನ್ನು ಪ್ರತ್ಯೇಕಿಸಿ ಸಂಗ್ರಹಿಸಲಾಗುತ್ತಿದೆ. ಇತರೆ ಗ್ರಾಮ ಪಂಚಾಯಿತಿಗಳಲ್ಲಿ ವಾಹನ ಮತ್ತು ಕಸಬುಟ್ಟಿ ಖರೀದಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸದರಿ ಗ್ರಾಮ ಪಂಚಾಯಿತಿಗಳಲ್ಲಿಯೂ ಸಹ ಒಣಕಸ ಸಂಗ್ರಹಿಸಲು ಕ್ರಮವಹಿಸಲಾಗುತ್ತಿದೆ.
ತಾಲ್ಲೂಕುವಾರು ವಿವರವನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.
<table>
<tr><th>ಕ್ರ.ಸ.</th><th>ತಾಲ್ಲೂಕು</th><th>ಒಟ್ಟು ಗ್ರಾ.ಪಂ</th><th>DPR ಅನುಮೋದನೆಯಾಗಿರುವ ಗ್ರಾ.ಪಂ.ಗಳು</th></tr>
<tr><td>1</td><td>ಕೃಷ್ಣರಾಜಪೇಟೆ</td><td>21</td><td>5</td></tr>
<tr><td>2</td><td>ಮದ್ದೂರು</td><td>38</td><td>7</td></tr>
<tr><td>3</td><td>ಮಳವಳ್ಳಿ</td><td>18</td><td>4</td></tr>
<tr><td>4</td><td>ಮಂಡ್ಯ</td><td>17</td><td>4</td></tr>
<tr><td>5</td><td>ನಾಗಮಂಗಲ</td><td>10</td><td>0</td></tr>
<tr><td>6</td><td>ಪಾಂಡವಪುರ</td><td>06</td><td>3</td></tr>
<tr><td>7</td><td>ಶ್ರೀರಂಗಪಟ್ಟಣ</td><td>10</td><td>5</td></tr>
<tr><td colspan="2">ಒಟ್ಟು</td><td>120</td><td>28</td></tr>
</table>
</td></tr>
<tr><td>(ಇ)</td><td>ಒಳಚರಂಡಿ ವ್ಯವಸ್ಥೆಯಿರುವ ಗ್ರಾಮಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)</td><td>ಸದರಿ ಜಿಲ್ಲೆಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.</td></tr>
</table>

...2

<table>
<tr>
<td>(ಈ)</td>
<td>ಒಳಚರಂಡಿಯಿಲ್ಲದ ಗ್ರಾಮಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಚಿಂತಿಸಿದೆಯೇ;</td>
<td>ಗ್ರಾಮೀಣ ಪ್ರದೇಶದಲ್ಲಿ ಉತ್ಪತ್ತಿಯಾಗುವ ದ್ರವತ್ಯಾಜ್ಯ ನಿರ್ವಹಣೆಗೆ ಒಳಚರಂಡಿ ನಿರ್ಮಾಣವು ಸೂಕ್ತವಲ್ಲದ ಕಾರಣ ಇತರೆ ವಿಕೇಂದ್ರೀಕೃತ ದ್ರವತ್ಯಾಜ್ಯ ನಿರ್ವಹಣೆಯ ವಿಧಾನಗಳನ್ನು ಬಳಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಾಮಾನ್ಯವಾಗಿ ಗ್ರಾಮೀಣ ಭಾಗದಲ್ಲಿ ಕಂಡುಬರುವ ದ್ರವತ್ಯಾಜ್ಯವನ್ನು ಎಡರು ರೀತಿಯಲ್ಲಿ ವರ್ಗೀಕರಿಸಲಾಗಿದೆ.
(1) ಬೂದು ನೀರು (Grey Water) ಮತ್ತು
(2) ಕಪ್ಪು ನೀರು (Black Water)
ಈ ರೀತಿ ಉತ್ಪತ್ತಿಯಾಗುವ ದ್ರವತ್ಯಾಜ್ಯವನ್ನು ಸೂಕ್ತ ವಿಲೇವಾರಿ ಮಾಡಲು ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಹಂತ-2ರ ಮಾರ್ಗಸೂಚಿಯಲ್ಲಿ ಸೂಕ್ತ ತಂತ್ರಜ್ಞಾನ ಮತ್ತು ಅನುದಾನ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಬೂದು ನೀರು (Grey Water) ನಿರ್ವಹಣೆ:
ಮನೆಯ ಹಂತದಲ್ಲಿ ಉತ್ಪತ್ತಿಯಾಗುವಂತಹ ಬೂದು ನೀರನ್ನು ವೈಯಕ್ತಿಕ ಇಂಗು ಗುಂಡಿ, ಸಮುದಾಯ ಇಂಗು ಗುಂಡಿ ಹಾಗೂ Water Stabilization Pond (WSP) ವಿಧಾನಗಳ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ದ್ರವತ್ಯಾಜ್ಯ ಬೂದು ನೀರು (Grey Water) ನಿರ್ವಹಣೆಗಾಗಿ ಒಟ್ಟಾರೆ ರೂ.820.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನವಾಗಿ ರೂ.205.45 ಕೋಟಿಗಳನ್ನು ಗ್ರಾಮ ಪಂಚಾಯಿತಿಗಳ ಜನಸಂಖ್ಯೆಗೆ ಅನುಗುಣವಾಗಿ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.
ಸದರಿ ಅನುದಾನವನ್ನು ಬೇಡಿಕೆಯನುಸಾರ ಬೂದು ನೀರು ನಿರ್ವಹಣೆಗಾಗಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕಪ್ಪು ನೀರು (Black Water) ನಿರ್ವಹಣೆ:
ಮಾನವನ ಮಲ ಮಿಶ್ರಿತ ದ್ರವತ್ಯಾಜ್ಯವನ್ನು "ಕಪ್ಪು ನೀರು" ಎಂದು ಕರೆಯಲಾಗುತ್ತಿದ್ದು, ಇಂತಹ ಶೌಚ ಗುಂಡಿಗಳ ಕಪ್ಪು ನೀರನ್ನು ಅವಳ-ಗುಂಡಿ ನಿರ್ಮಾಣ, Trenching, Co-treatment ಹಾಗೂ ಮಲ ತ್ಯಾಜ್ಯ ನಿರ್ವಹಣೆ (FSTP) ಘಟಕಗಳ ಮೂಲಕ ನಿರ್ವಹಣೆ ಮಾಡಲು ವಿವಿಧ ಹಂತಗಳಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಪ್ರಾಯೋಗಿಕವಾಗಿ 16 ಸ್ಥಳಗಳಲ್ಲಿ ಮಲತ್ಯಾಜ್ಯ ನಿರ್ವಹಣಾ ಘಟಕಗಳ ಅನುಷ್ಠಾನಕ್ಕಾಗಿ ತಾಂತ್ರಿಕ ಪರಿಣಿತಿಹೊಂದಿದ ಸಂಸ್ಥೆಯವರ ಸಹಕಾರದೊಂದಿಗೆ DPR ಸಿದ್ಧಪಡಿಸಿ ಅನುಮೋದನೆ ನೀಡಲಾಗಿದ್ದು ಸದರಿ ಘಟಕಗಳ ನಿರ್ಮಾಣ ಕಾಮಗಾರಿಗಳು ಅನುಷ್ಠಾನ ಹಂತದಲ್ಲಿರುತ್ತದೆ.</td>
</tr>
<tr>
<td>(ಉ)</td>
<td>ಹಾಗಿದ್ದಲ್ಲಿ, ಇದುವರೆವಿಗೂ ಈ ಯೋಜನೆಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಲಾದ ಅನುದಾನವೆಷ್ಟು? (ವರ್ಷವಾರು ವಿವರ ನೀಡುವುದು)</td>
<td>ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆಗೆ ವೆಚ್ಚ ಮಾಡಲಾದ ಅನುದಾನದ ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.
(ರೂ.ಲಕ್ಷಗಳಲ್ಲಿ)
<table><tr><th>ವರ್ಷ</th><th>ವೆಚ್ಚ</th></tr><tr><td>2017-18</td><td>0.00</td></tr><tr><td>2018-19</td><td>0.00</td></tr><tr><td>2019-20</td><td>42.33</td></tr></table></td>
</tr>
</table>

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು